# ಸ್ವಾಮಿ ವಿವೇಕಾನಂದ : ಆದರ್ಶ ಸಂನ್ಯಾಸಿ

ಬ್ರ. ಅಭಯಚೈತನ್ಯ

**ವಿವೇಕಾನಂದರನ್ನು ಯೋಧ ಸಂನ್ಯಾಸಿ, ಬಿರುಗಾಳಿ ಸಂನ್ಯಾಸಿ, ದೇಶಭಕ್ತ ಸಂನ್ಯಾಸಿ ಎಂದು ಮುಂತಾಗಿ ಗುರುತಿಸುವುದು ವಾಡಿಕೆ. ಅವರು ಏನೇ ಆಗಿದ್ದರೂ ಬಹುಮುಖ್ಯವಾಗಿ ಆದರ್ಶ ಸಂನ್ಯಾಸಿಯಾಗಿದ್ದರು ಎಂಬುದನ್ನು ತೋರಿಸಿಕೊಟ್ಟಿರುವ ಬ್ರಹ್ಮಚಾರಿ ಅಭಯಚೈತನ್ಯರು ಮೈಸೂರು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು.**

ಸುಮಾರು ನೂರ ಏಳು ವರ್ಷಗಳ ಹಿಂದಿನ ಮಾತು. ಸ್ಥಳ, ಸಹಸ್ರದ್ವೀಪೋದ್ಯಾನ. ರಮಣೀಯವಾದ ಪ್ರಕೃತಿಸೌಂದರ್ಯ. ಆದರೆ ಆಶ್ಚರ್ಯವೆಂಬಂತೆ ಅಲ್ಲಿ ಆ ದಿನ ನೆರೆದಿದ್ದಂತಹ ಶ್ರೋತೃವೃಂದವೊಂದು ಸುತ್ತಲಿನ ಸರಸಮಯ ಪರಿಸರದ ಕರೆಯನ್ನೂ ನಿರ್ಲಕ್ಷಿಸಿ ತದೇಕಚಿತ್ತದಿಂದ ಒಬ್ಬ ಯುವ ಸಂನ್ಯಾಸಿಯ ಮುಖನಿಸೃತ ವಾಣಿಯನ್ನಾಲಿಸುತ್ತಿತ್ತು. ಆ ಸಂನ್ಯಾಸಿ ಅಲ್ಲಿ ನೆರೆದಿದ್ದವರ ಮುಂದೆ ತ್ಯಾಗ-ವೈರಾಗ್ಯಗಳ ಮಹಿಮೆಯನ್ನೂ, ಸಂನ್ಯಾಸದಿಂದ ದೊರಕಬಹುದಾದ ಮುಕ್ತಿಯ ಮಹದಾನಂದ ವನ್ನೂ ಬಣ್ಣಿಸುತ್ತಿದ್ದಾನೆ. ಸ್ವಲ್ಪ ಹೊತ್ತಿನ ಬಳಿಕ ಇದ್ದಕ್ಕಿದ್ದಂತೆ ಅವರನ್ನೆಲ್ಲ ಬಿಟ್ಟು ಎಲ್ಲೋ ಮಾಯವಾದ ಆ ಸಂನ್ಯಾಸಿ. ಹಿಂದಿ ರುಗಿ ಬಂದಾಗ ಆತನ ಕೈಯಲ್ಲೊಂದು ಕವನವಿತ್ತು! ತನ್ನ ಮಧುರ ಕಂಠದಿಂದ, ಗಂಭೀರ ಹಾಗೂ ಶಕ್ತಿಯುತ ಧ್ವನಿಯಲ್ಲಿ ಪಠಿಸು ತ್ತಿದ್ದಾನೆ :

> "....ನಿನ್ನ ಕೈಲಿದೆ ನಿನ್ನ ಬಿಗಿದಿಹ ಕಬ್ಬಿಣದ ಯಮಪಾಶವು;
> ಬರಿದೆ ಶೋಕಿಪುದೇಕೆ? ಬಿಡು, ಬಿಡು! ನಿನಗೆ ನೀನೇ ಮೋಸವು..." ಇತ್ಯಾದಿ.

ಅದು ತ್ಯಾಗ-ವೈರಾಗ್ಯಗಳ ಪ್ರತೀಕನಾದ ಒಬ್ಬ ಸಂನ್ಯಾಸಿಯ ಜೀವಾದರ್ಶವನ್ನು ಕುರಿತ, ಅತ್ಯಂತ ಅಲ್ಪಾವಧಿಯಲ್ಲಿ ರಚಿತವಾದ "ಸಂನ್ಯಾಸಿ ಗೀತೆ." ಕೇಳುತ್ತಿದ್ದವರಿಗೆಲ್ಲ ಅನಿಸುತ್ತಿತ್ತು, ಈತ ತನ್ನ ಆತ್ಮಚರಿತ್ರೆಯನ್ನೇ ಇದೀಗ ಕವನದ ರೂಪಿನಿಂದ ಮಂಡಿಸಿದನೆ ಎಂಬುದಾಗಿ. ಆ ಸಂನ್ಯಾಸಿ ಇನ್ನಾರೂ ಅಲ್ಲ, ಭೋಗದ ನಾಡಿಗೆ ತ್ಯಾಗ-ವೈರಾಗ್ಯಗಳ ಸಂದೇಶವನ್ನೀಯಲೆಂದೇ ಬಂದಿದ್ದ ಸನಾತನ ಧರ್ಮದ ಪ್ರತಿನಿಧಿ, ಸ್ವಾಮಿ ವಿವೇಕಾನಂದರು.

### ಆದರ್ಶಾಭಿಮಾನಿ

ಯಾರಿಗೆ ತನ್ನ ಆದರ್ಶದಲ್ಲಿ ಅಭಿಮಾನವಿಲ್ಲವೋ ಆತ ಅದಕ್ಕಾಗಿ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಲಾರ. ತನ್ನನ್ನು ಆದರ್ಶಕ್ಕೆ ಬಲಿಕೊಡದವನು ಸಿದ್ಧಿದೇವತೆಯನ್ನು ಹೇಗೆ ಒಲಿಸಿ ಕೊಂಡಾನು? ಸ್ವಾಮಿ ವಿವೇಕಾನಂದರಿಗೆ ಸಂನ್ಯಾಸದ ಮೇಲಿದ್ದ ಅಭಿಮಾನ ಅಷ್ಟು ಗಾಢವಾದದ್ದು. ಪುಟ್ಟ ಬಾಲಕನಾದ ನರೇಂದ್ರ ನಿಗೆ (ಸ್ವಾಮಿ ವಿವೇಕಾನಂದರ ಹಿಂದಿನ ಹೆಸರು) ಸಂನ್ಯಾಸಿಗಳನ್ನು ಸತ್ಕರಿಸುವುದರಲ್ಲಿ, ಅವರಿಗೇನಾದರೂ ಸಹಾಯ ಮಾಡುವುದರಲ್ಲಿ ಎಲ್ಲಿಲ್ಲದ ಆಸಕ್ತಿ. ಕೆಲವೊಮ್ಮೆ ಸ್ನೇಹಿತರೊಡಗೂಡಿ ಹಸ್ತ ಸಾಮುದ್ರಿಕ ನೋಡುವ ಆಟವಾಡುತ್ತಿದ್ದ. ಆಗ ಅವನು ತನ್ನ ಕೈಯನ್ನು ಸ್ನೇಹಿತರಿಗೆ ತೋರಿಸುತ್ತ ಹೆಮ್ಮೆಯಿಂದ ಹೇಳುತ್ತಿದ್ದ: "ನೋಡ್ರೋ ಇಲ್ಲಿ, ನನ್ನ ಕೈಯಲ್ಲಿ ಸಂನ್ಯಾಸರೇಖೆ ಇದೆ! ಈ ಗೆರೆ, ಇಲ್ಲಿ ಕಾಣ್ಸತ್ತಲ್ಲ, ಅದೇ ಸಂನ್ಯಾಸ ರೇಖೆ. ನಾನು ಮುಂದೆ ಖಂಡಿತ ಸಂನ್ಯಾಸಿಯಾಗ್ತೀನಿ." ಅವರ ಪ್ರತಿಯೊಂದು ಪತ್ರದಲ್ಲೂ ನಮಗೆ ನಿಜವಾದ ಸಂನ್ಯಾಸಿಯ ಆಂತರ್ಯದ ಪರಿಚಯ ವಾಗುತ್ತದೆ. ಹರಿದಾಸ್ ವಿಹಾರಿದಾಸ್ ದೇಸಾಯಿಗೆ ಬರೆಯುತ್ತಾರೆ: "...ಸಂನ್ಯಾಸಿಯು (ಅಂದರೆ ತನ್ನನ್ನುದ್ದೇಶಿಸಿ) ತನ್ನ ಸಂನ್ಯಾಸ ತನವನ್ನು ಒಂದಿನಿತೂ ಕಳೆದುಕೊಂಡಿಲ್ಲ, ತನ್ನ ಜೀವನಶೈಲಿ ಯಲ್ಲೂ ಕೂಡ." ಮೇರಿ ಹೇಲ್‌ಳಿಗೆ ಬರೆದ ಪತ್ರದಲ್ಲಂತೂ (ಫೆಬ್ರುವರಿ ೧, ೧೮೯೫) ಸ್ವಾಮೀಜಿ ಗುಡುಗುತ್ತಾರೆ," ಸೋದರಿ, ನೀನಿನ್ನೂ ಸಂನ್ಯಾಸಿಯನ್ನು ಅರಿಯೆ. 'ಅವನು ವೇದಗಳ ಶಿರಮೆಟ್ಟಿ ನಿಲ್ಲುವನು' ಎನ್ನುತ್ತವೆ ವೇದಗಳು...."

### ವಿವೇಕ-ಜ್ಞಾನ-ವಿಜ್ಞಾನ

"ಜ್ಞಾನಂ ಸಂನ್ಯಾಸ ಲಕ್ಷಣಮ್" (ನಾರದಪರಿವ್ರಾಜಕ ಉಪನಿಷತ್, ೩.೧೬) ಎಂಬ ಮಾತಿದೆ. ಒಬ್ಬ ಆದರ್ಶ ಸಂನ್ಯಾಸಿ, ಸಮ್ಯಗ್ ಜ್ಞಾನದಿಂದ ಪರಿಪಕ್ವಗೊಂಡ ವೈರಾಗ್ಯವನ್ನು ಆಶ್ರಯಿಸಿ ಸಂನ್ಯಾಸ ಸ್ವೀಕರಿಸಿರುತ್ತಾನೆ. ನರೇಂದ್ರನ ಉಜ್ಜ್ವಲ ಮುಮು ಕ್ಷುತ್ವ, ಕಠಿಣ ತಪಶ್ಚರ್ಯೆಗಳನ್ನು ನೋಡಿದ ಶ್ರೀರಾಮಕೃಷ್ಣರು ಅವನನ್ನು ಪ್ರಥಮಾಧಿಕಾರಿಯೆಂದು ತೀರ್ಮಾನಿಸಿ ಆತನಿಗೆ ಸರ್ವೋಚ್ಚ ಸ್ಥಿತಿಯಾದ ನಿರ್ವಿಕಲ್ಪ ಸಮಾಧಿಯ ಅನುಭವವನ್ನು ಮಾಡಿಸಿಕೊಟ್ಟಿದ್ದರು. ಅಷ್ಟೇ ಅಲ್ಲದೆ, ಕೇವಲ ಸಮಾಧಿಸ್ಥಿತಿಯಲ್ಲಿ ಮಾತ್ರವಲ್ಲದೆ, ಎಲ್ಲರಲ್ಲಿಯೂ ಭಗವಂತನನ್ನು ಕಾಣುವ ವೇದಾಂತದ ಅತ್ಯುನ್ನತ ಸ್ಥಿತಿಯನ್ನೂ ಅವನು ತಲುಪುವಂತೆ ಅವರು ಮಾಡಿದರು. ಹೀಗೆ ಶ್ರೀರಾಮಕೃಷ್ಣರಿಂದ ಜ್ಞಾನ-ವಿಜ್ಞಾನಗಳನ್ನು ಸಿದ್ಧಿಸಿಕೊಂಡು ನರೇಂದ್ರ ವಿದ್ವತ್ ಸಂನ್ಯಾಸವನ್ನು ಸ್ವೀಕರಿಸಿ ಸ್ವಾಮಿ ವಿವೇಕಾನಂದರೆಂಬ ಹೆಸರಿನಿಂದ ವಿಶ್ವ ವಿಖ್ಯಾತನಾಗು ತ್ತಾನೆ. ತನ್ನ ಸ್ವಂತ ಮೋಕ್ಷವನ್ನು ಬದಿಗೆ ತಳ್ಳಿ ಪರಮೋಕ್ಷ ಚಿಂತಕನಾದ, ಸರ್ವಭೂತಗಳಿಗೂ ಹಿತಕೋರುವ ಆದರ್ಶ ಸಂನ್ಯಾಸಿಯಾಗಿ ನಿರ್ಮಾಣಗೊಳ್ಳುತ್ತಾನೆ.

### ತೀರ್ಥೀಕುರ್ವಂತಿ....

ತಮ್ಮತನವನ್ನೇ ಮರೆತು ಯಾರು ಸದಾ ಜಗತ್‌ಕಲ್ಯಾಣದಲ್ಲೇ



ನಿರತರಾಗಿರುವರೋ ಅವರೇ ಪವಿತ್ರರು. ಸ್ವಾಮಿ ವಿವೇಕಾನಂದರ ಪಾವಿತ್ರ್ಯ ವಿದೇಶೀಯರ ಅನುಭವಕ್ಕೂ ಬರುತ್ತಿತ್ತು. ಶ್ರೀಮತಿ ಲಿಲ್ಲಿಯನ್ ಮೊಂಟ್‌ಗೊಮೆರಿ ಎಂಬ ಮಹಿಳೆ ಹೇಳುತ್ತಾರೆ : " 'ಪವಿತ್ರಾತ್ಮರೇ ಧನ್ಯರು: ಏಕೆಂದರೆ ಅವರಿಗೆ ಭಗವದ್ದರ್ಶನ ಲಭಿಸುತ್ತದೆ' ಎಂದು ಅವರು (ಸ್ವಾಮಿ ವಿವೇಕಾನಂದರು) ಹೇಳಿದ್ದನ್ನು ಕೇಳಿದ್ದೇನೆ. ಆದರೆ ವಿವೇಕಾನಂದರು ಮಾತನಾಡುವಾಗ, ಆ ವ್ಯಕ್ತಿತ್ವದ ಪಾವಿತ್ರ್ಯ ಅದೆಷ್ಟು ಮಹತ್ತಾದುದೆಂದರೆ, ಅವರಲ್ಲಿ ದಿವ್ಯತೆ ಪ್ರತಿಬಿಂಬಿಸುತ್ತಿರುವುದಾಗಿ ನನಗೆ ಭಾಸವಾಗುತ್ತಿತ್ತು."

ಸ್ವಾಮೀಜಿಯವರ ಪಾವಿತ್ರ್ಯ ಎಷ್ಟೋ ವೇಳೆ ಸಮಾಜದ ಅತಿ ತಿರಸ್ಕೃತ ವರ್ಗದ ಜನಗಳಿಗೂ ಘನೀಭೂತವಾಗಿ ಅನುಭವಕ್ಕೆ ಬರುತ್ತಿತ್ತು. ಒಮ್ಮೆ ಸ್ವಾಮೀಜಿ ಭಾರತಕ್ಕೆ ಬರುವ ಮಾರ್ಗದಲ್ಲಿ ಈಜಿಪ್ಟಿನ ಕೈರೋ ನಗರಕ್ಕೆ ಬಂದಿಳಿದಿದ್ದಾರೆ. ನಗರ ವೀಕ್ಷಣೆಗಾಗಿ ತಮ್ಮ ವಿದೇಶೀ ಶಿಷ್ಯರೊಂದಿಗೆ ಸಂಭಾಷಿಸುತ್ತ ಹಾದಿ ತುಳಿಯುತ್ತಿದ್ದ ಸ್ವಾಮೀಜಿ ದಾರಿತಪ್ಪಿ ಒಂದು ಕುಪ್ರಸಿದ್ಧ ರಸ್ತೆಗೆ ಬಂದರು. ಅಲ್ಲಿ ಕೆಲವು ಅರೆ ಬೆತ್ತಲೆ ಮಹಿಳೆಯರು ಗಟ್ಟಿಯಾಗಿ ನಗುತ್ತ ಇವರನ್ನು ಕೂಗಿ ಕರೆದರು. ಸ್ವಾಮೀಜಿಯ ಶಿಷ್ಯೆಯರು ಅವರನ್ನು ಅವಸರ ಪಡಿಸುತ್ತ ಬೇಗ ಬೇಗ ಹೆಜ್ಜೆ ಹಾಕಿದರು. ಆದರೆ ಸ್ವಾಮೀಜಿ ಮೆಲ್ಲನೆ ಗುಂಪಿನಿಂದ ಬೇರ್ಪಟ್ಟು ಆ ಹೆಂಗಸರಿದ್ದಲ್ಲಿಗೆ ಹೆಜ್ಜೆ ಹಾಕಿದರು. ಅವರನ್ನು ಬಳಿಸಾರಿದ ಸ್ವಾಮೀಜಿ ಉದ್ಗರಿಸಿದರು, "ಹೋ, ದುರ್ದೈವವೇ! ನೋಡಾ ಮಗುವನ್ನು! ತಾನು ಯಾರೆಂಬುದನ್ನೇ ಮರೆತಿದ್ದಾಳೆ. ತನ್ನ ದೈವತ್ವವನ್ನು ದೇಹದೊಳಗೆ ಮರೆಮಾಚಿದ್ದಾಳೆ!" ಹೀಗೆನ್ನುತ್ತ ಅವರು ಕಣ್ಣೀರು ಸುರಿಸತೊಡಗಿದರು. ಇದನ್ನು ಕಂಡ ಆ ಮಹಿಳೆಯರು ವಿಸ್ಮಯ ಲಜ್ಜೆಗಳಿಂದ ಸ್ತಬ್ಧರಾದರು. ಒಬ್ಬಳು ಮುಂದೆ ಬಾಗಿ ಸ್ವಾಮೀಜಿಯವರ ಬಟ್ಟೆಯಂಚಿಗೆ ಭಕ್ತಿಗೌರವ ಸೂಚಕವಾಗಿ ಮುತ್ತಿಟ್ಟು, ಮುರುಕು ಸ್ಪ್ಯಾನಿಷ್ ಭಾಷೆಯಲ್ಲಿ ಉದ್ಗರಿಸಿದಳು: "ದೇವ ಮಾನವ! ದೇವಮಾನವ!" ಮತ್ತೊಬ್ಬಳು ಅವರ ಪವಿತ್ರ ಕಂಗಳಿಂದ ತನ್ನ ಅಪವಿತ್ರ ವ್ಯಕ್ತಿತ್ವನ್ನು ಮರೆಮಾಡಲು, ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡಳು.

ಅಭೀಃ ಅಭೀಃ!

"ವೈರಾಗ್ಯಮೇವಾಭಯಮ್" ಎಂದಿದ್ದಾನೆ ಭರ್ತೃಹರಿ. ಮಾನ-ಪ್ರಾಣ ಹಾನಿಗಳಿಗೂ ಅಂಜದ ಸಂನ್ಯಾಸಿಯು ಇನ್ನಾವುದಕ್ಕೆ ಹೆದರುವನು? ಸಮಸ್ತ ಸೃಷ್ಟಿಗೆ ತನ್ನಿಂದ ಅಭಯವನ್ನು ದಾನ ಮಾಡುವ ವ್ರತವನ್ನು ತೊಟ್ಟ ಸಂನ್ಯಾಸಿ ಸ್ವತಃ ಯಾರಿಗೆ ಭಯ ಪಡಬೇಕಾಗಿದೆ? ಸತ್ಯಪಕ್ಷಪಾತಿಗಳಾದ ಸ್ವಾಮೀಜಿ ಮುಚ್ಚು ಮರೆಯಿಲ್ಲದ ತೀರ್ಪನ್ನು ನೀಡುತ್ತಿದ್ದರು. ಅವನೆಂತಹ ಘನವಂತ ವ್ಯಕ್ತಿಯೇ ಆಗಿರಲಿ, ಆತನ ದೋಷವನ್ನು ಅವನಿಗೆ ಎತ್ತಿ ತೋರಿಸುತ್ತಿದ್ದರು. ವಿವೇಕಾನಂದರು ಹೀಗೆ ನಿರ್ಭೀತರಾಗಿ ಮಾತನಾಡುತ್ತಿದ್ದುದನ್ನು ನೋಡಿ ಒಮ್ಮೆ ಮೈಸೂರಿನ ಮಹಾರಾಜರು ಅವರಿಗೊಂದು ಸ್ನೇಹದ ಸಲಹೆ ಕೊಡುತ್ತಾರೆ: "ಸ್ವಾಮೀಜಿ, ನೀವು ಹೀಗೆ ಮುಚ್ಚುಮರೆಯಿಲ್ಲದೆ ಮಾತನಾಡುವುದು ಯಾವಾಗಲೂ ಕ್ಷೇಮವಲ್ಲ. ಇಂದು ನೀವು ನನ್ನ ಆಸ್ಥಾನಿಕರೆದುರು ಮಾತನಾಡಿದಂತೆಯೇ ಮಾತನಾಡುತ್ತಿದ್ದರೆ, ನನಗನ್ನಿಸುತ್ತದೆ, ನಿಮಗೆ ಯಾರಾದರೂ ವಿಷ ಹಾಕಲೂಬಹುದು. ಆದ್ದರಿಂದ ದಯವಿಟ್ಟು ಎಚ್ಚರ ವಹಿಸಬೇಕು." ತಕ್ಷಣ ಸ್ವಾಮೀಜಿ ಸಿಡಿದೆದ್ದರು: "ಏನು, ಒಬ್ಬ ಪ್ರಾಮಾಣಿಕ ಸಂನ್ಯಾಸಿ ತನ್ನ ಪ್ರಾಣವೇ ಹೋಗುವಂಥ ಸಂದರ್ಭವೊದಗಿದರೂ ಸತ್ಯವನ್ನು ಹೇಳಲು ಹೆದರುತ್ತಾನೆಂದು ಭಾವಿಸಿದೆಯಾ ರಾಜ? ನಾಳೆ ನಿನ್ನ ಮಗನೇ ಬಂದು ನನ್ನನ್ನು, 'ಸ್ವಾಮೀಜಿ, ನನ್ನ ತಂದೆ ಹೇಗೆ' ಎಂದು ಕೇಳಿದರೆ ಆಗ ನಾನು

ನಿನ್ನಲ್ಲಿ ಇಲ್ಲದಿರುವ ಸದ್ಗುಣಗಳೆಲ್ಲ ಇವೆ ಎಂದು ಹೇಳಬೇಕೇನು?ನಾನೆಂದಿಗೂ ಸುಳ್ಳು ಹೇಳೆನು." ಮುಂದೊಮ್ಮೆ ಅಮೆರಿಕವಲ್ಲಿ ಕ್ರೈಸ್ತಮಿಷನರಿಗಳೊಂದಿಗೆ "ಒಪ್ಪಿವ್", "ರುಚಿರುಚಿ" ಯಾವ ಮಾತುಗಳನ್ನಾಡುತ್ತ ಹೊಂದಿಕೊಳ್ಳಬೇಕೆಂದು ಯಾರೋ ಸ್ವಾಮೀಜಿಗೆ ಸಲಹೆ ಇತ್ತಾಗ ಮೇರಿ ಹೇಲ್‌ಳಿಗೆ ಬರೆಯುತ್ತಾರೆ: "ಸೋದರಿ, ನನ್ನನ್ನು ಕ್ಷಮಿಸು, ಸುಳ್ಳಿನೊಂದಿಗೆ ಸಾಮರಸ್ಯದಿಂದಿರಲಾರೆ. ಈಗ ಒಳಗೇನೇನಿದೆಯೋ ಎಲ್ಲ ಹೊರಕ್ಕೆ ಬಂದುಬಿಡಲಿ... ಸತ್ಯದ ಆದೇಶಕ್ಕೆ ತಲೆಬಾಗುವುದನ್ನು ಬಿಟ್ಟು ನಾನೇಕೆ ನನ್ನ ಸುತ್ತಲಿನ ಪ್ರಪಂಚದ ಹುಚ್ಚಾಟಗಳಿಗೆ ಹೊಂದಿಕೊಳ್ಳಬೇಕು?... ನನ್ನ ನಡವಳಿಕೆಗಳನ್ನು ನಾಜೂಕಾಗಿಸಿಕೊಳ್ಳಲು ನನಗೆ ವ್ಯವಧಾನವಿಲ್ಲ."

"ಸಮದರ್ಶಿಯೆಂದಿಹುದು ನಿನ್ನ ಬಿರುದು"

"ನಾನು ಸಮದರ್ಶಿತ್ವವನ್ನು ನಂಬುತ್ತೇನೆ" ಎಂದು ಸ್ವಾಮೀಜಿ ಮೇರಿಗೆ ಬರೆಯುತ್ತಾರೆ. ಸರ್ವರಲ್ಲಿಯೂ ಅದೇ ಬ್ರಹ್ಮವನ್ನು ಕಾಣುತ್ತಿದ್ದ ಸ್ವಾಮೀಜಿ, ಒಬ್ಬ ನೀಚನಲ್ಲಿಯೂ ಅದೇ ದಿವ್ಯತೆಯಿದ್ದು ವಿಕಟರೂಪದಲ್ಲಿ ಪ್ರಕಟಗೊಂಡಿರುವುದಾಗಿಯೂ ಅವಕಾಶ ಹಾಗೂ ತಕ್ಕ ಪರಿಸರ ದೊರೆತಲ್ಲಿ ಹುದುಗಿರುವ ದಿವ್ಯತೆಯು ವ್ಯಕ್ತವಾಗುವುದಾಗಿಯೂ ನಂಬಿದ್ದರು. ತಮ್ಮ ಪರಿವ್ರಾಜಕ ದಿನಗಳಲ್ಲಿ ಸ್ವಾಮೀಜಿ ಕೆಲವೊಮ್ಮೆ ರಾಜನ ಅರಮನೆಯಲ್ಲಿ ತಂಗುತ್ತಿದ್ದರೆ, ಮತ್ತೊಮ್ಮೆ ಬಡ ಕಾರಕೂನನ ಜೋಪಡಿಯಲ್ಲಿ, ಇಲ್ಲದಿದ್ದರೆ ಪಾಳು ಬಿದ್ದ ದೇವಾಲಯದಲ್ಲಿಯೋ ಅಥವಾ ಕೇವಲ ತರುತಲದಲ್ಲಿಯೇ ವಿಶ್ರಮಿಸುತ್ತಿದ್ದರು. ಅವರ ಜೀವನದುದ್ದಕ್ಕೂ ನಾವು ಕಾಣುವುದೇನೆಂದರೆ ಸ್ವಾಮೀಜಿ ತಮ್ಮೊಂದಿಗೆ ಒಡನಾಡುವ ವ್ಯಕ್ತಿ ರಾಜ-ರಂಕ, ಬ್ರಾಹ್ಮಣ-ಶೂದ್ರ, ಹಿಂದೂ-ಅನ್ಯಧರ್ಮೀಯ, ಸಂತ-ಸೈತಾನ, ಪುರುಷ-ಸ್ತ್ರೀ, ಇವರೆಲ್ಲರಲ್ಲಿಯೂ ಆತ್ಮತತ್ತ್ವವನ್ನೆ ಕಾಣುತ್ತ ಅದರಂತೆಯೇ ವರ್ತಿಸುತ್ತಿದ್ದರು.

ಸರ್ವಧರ್ಮಾನ್ ಪರಿತ್ಯಜ್ಯ...

ಸಂನ್ಯಾಸಿಯು ಸರ್ವಧರ್ಮಗಳನ್ನೂ ತ್ಯಜಿಸಿ ಭಗವಂತನನ್ನೇ ಸಂಪೂರ್ಣವಾಗಿ ಶರಣು ಹೋಗಿರುತ್ತಾನೆ. ತಾನು ಮಾಡುವ ಪ್ರತಿಯೊಂದು ಕರ್ಮವೂ, ಅದು ಎಷ್ಟೇ ಕ್ಷುಲ್ಲಕದ್ದಾಗಿರಲಿ, ಭಗವತ್ಪ್ರೇರಣೆಯೆಂದು, ಅದನ್ನು ಭಗವಂತನಿಗೇ ಅರ್ಪಿಸುತ್ತಾನೆ. ವಿವೇಕಾನಂದರ ಜೀವನ "ಕಾಳಿರೂಪಿ ಶ್ರೀರಾಮಕೃಷ್ಣ"ವೆಂಬ ಶಕ್ತಿಯಿಂದ ಚಾಲಿತ ನೌಕೆಯಂತಿತ್ತು. ಅಮೆರಿಕೆಯ ವೇದಿಕೆಗಳ ಮೇಲೆ ನಿಂತು ಭಾಷಣಗಳನ್ನು ನೀಡಿ ವಿಶ್ವವಿಖ್ಯಾತರಾದ ಮೇಲೆ ಅವರು ರಾಮಕೃಷ್ಣಾನಂದರಿಗೊಮ್ಮೆ ಬರೆಯುತ್ತಾರೆ: "... ನಾನು ಯಂತ್ರ, ಅವನು ಚಾಲಕ, ಈ ಯಂತ್ರದ ಮೂಲಕ ಭಗವಂತ ಈ ದೂರದ ನಾಡಿನಲ್ಲಿ ಸಾವಿರಾರು ಜನಗಳ ಹೃದಯದಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಜಾಗ್ರತಗೊಳಿಸುತ್ತಿದ್ದಾನೆ. ಸಾವಿರಾರು ಸ್ತ್ರೀಪುರುಷರು ನನ್ನನ್ನು ಪ್ರೀತಿಸುತ್ತಾರೆ, ಗೌರವಿಸುತ್ತಾರೆ.... ನಾನು ಹೋಗುವ ಊರುಗಳಲ್ಲೆಲ್ಲ ಒಂದು ಕೋಲಾಹಲವೇ ಏರ್ಪಡುತ್ತದೆ. ಅವರು ನನಗೆ "ಸುಂಟರಗಾಳಿ ಹಿಂದೂ" ಎಂದು ಹೆಸರಿಟ್ಟಿದ್ದಾರೆ. ನೆನಪಿಡು, ಇವೆಲ್ಲ ಭಗವಂತನಿಚ್ಛೆ; ನಾನು ಆಕಾರವಿಲ್ಲದ ಒಂದು ಧ್ವನಿ ಮಾತ್ರ....." ತಾವು ಮಾಡುವ ಪ್ರತಿಯೊಂದು ಕಾರ್ಯಕ್ಕೂ "ಮೇಲಿ"ನಿಂದ ಅಪ್ಪಣೆ ಪಡೆದೇ ಮುಂದುವರೆಯುತ್ತಿದ್ದರು, ಸ್ವಾಮೀಜಿ. ಅವರು ಹರಿದಾಸ್ ವಿಹಾರಿದಾಸ್ ದೇಸಾಯಿಗೆ ಬರೆಯುತ್ತಾರೆ, "ಮಾನವ ಸಹಾಯವನ್ನು ನಾನು ನನ್ನ ಕಾಲಿನಿಂದ ಆಚೆಗೆಸೆಯುತ್ತೇನೆ. ಗಿರಿ-ಕಂದರಗಳಲ್ಲಿ, ಮರುಭೂಮಿ-ಪರ್ವತಗಳಲ್ಲಿ ಯಾರು ನನಗಾಸರೆಯಾಗಿದ್ದರೊ, ಅವನೇ ಮುಂದೆಯೂ ನನ್ನೊಂದಿಗಿರುತ್ತಾನೆಂಬ ಭರವಸೆ ನನಗಿದೆ."

"ತೃಣಾದಪಿ ಸುನೀಚೇನ..."

ಸ್ವಾಮಿ ವಿವೇಕಾನಂದರಲ್ಲಿ"ಅಹಂಕಾರಶೂನ್ಯತೆ" ಯೆಂಬುದೊಂದು ಎದ್ದುತೋರುವ ಗುಣವಾಗಿತ್ತು. ತಾವೊಬ್ಬ ಸಂನ್ಯಾಸಿ, ವಿಶ್ವವಿಖ್ಯಾತ ವಾಗ್ಮಿ, ಆಧ್ಯಾತ್ಮಿಕ ಸಿದ್ಧಿಯ ಚರಮ ಹಂತವನ್ನು ಮುಟ್ಟಿದ್ದ ಸಾಧಕಶ್ರೇಷ್ಠನೆಂದೂ, ತಮಗೆ ಉನ್ನತ ಗೌರವಾದರಗಳೂ ಪೀಠ-ಪದವಿಗಳೂ ಸಲ್ಲಬೇಕೆಂದೂ ಸ್ವಾಮೀಜಿ ಬಯಸದೆ ಇರುವುದಷ್ಟೆ ಅಲ್ಲದೆ, ತಾವು ಜೀವರೂಪೀ ಶಿವನ ಭೃತ್ಯನೆಂದೇ ಬಗೆದಿದ್ದರು. ಅವರೊಂದಿಗೇ ವಾಸಿಸುತ್ತ, ಅವರೊಡನೆ ಓಡಾಡಿಕೊಂಡಿದ್ದು, ಅವರನ್ನು ತಮ್ಮ ಹರಿತವಾದ ಬುದ್ಧಿಯಿಂದ ಅಳೆದೂ ಸುರಿದೂ ಮಾಡಿದ್ದ ಸ್ವಾಮೀಜಿಯ ವಿದೇಶೀ ಶಿಷ್ಯ-ಶಿಷ್ಯೆಯರೂ, ಸ್ವಾಮೀಜಿಯ ಈ ನಿರಭಿಮಾನವನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಸ್ವಾಮೀಜಿಯವರು ಬೇಲೂರಿನ ನೀಲಾಂಬರ ಮುಖರ್ಜಿ ತೋಟದ ಮನೆಯಲ್ಲಿ (ಆಗ ರಾಮಕೃಷ್ಣ ಮಿಷನ್ ಇನ್ನೂ ಈಗಿನ ಬೇಲೂರು ಮಠಕ್ಕೆ ವರ್ಗಾವಣೆಯಾಗಿರಲಿಲ್ಲ) ವಾಸಿಸುತ್ತಿದ್ದಾಗ ಒಮ್ಮೆ ಅಲ್ಲಿಗೆ ಬೌದ್ಧಸಂನ್ಯಾಸಿ ಧರ್ಮಪಾಲರ ಆಗಮನವಾಗುತ್ತದೆ. ಅದು ವರ್ಷಾಕಾಲವಾದ್ದರಿಂದ ಧಾರಾಕಾರವಾಗಿ ಮಳೆ ಬೀಳುತ್ತಿತ್ತು. ನೆಲವೂ ಕೆಸರಿನಿಂದ ಕೂಡಿ ಜಾರುತ್ತಿತ್ತು. ಧರ್ಮಪಾಲರು ಶ್ರೀಮತಿ ಓಲಿ ಬುಲ್‌ರನ್ನು ನೋಡಬಯಸಿದ್ದರಿಂದ ಸ್ವಾಮೀಜಿ ಸ್ವತಃ ತಾವೇ ಅವರನ್ನು ಬುಲ್ ವಾಸಿಸುತ್ತಿದ್ದ ಕುಟೀರಕ್ಕೆ ಕರೆದುಕೊಂಡು ಹೋದರು. ಇಬ್ಬರೂ ನಿಧಾನವಾಗಿ ಹೆಜ್ಜೆ ಹಾಕುತ್ತ ಕಷ್ಟಪಟ್ಟುಕೊಂಡು ಹೋಗುತ್ತಿದ್ದರು. ಆದರೆ ಒಂದೆಡೆ ಧರ್ಮಪಾಲರ ಕಾಲೊಂದು ಕೆಸರಿನಲ್ಲಿ ಹೂತುಹೋಯಿತು. ಅವರು ಕಾಲನ್ನು ಹೊರತೆಗೆಯಲು ಕಷ್ಟಪಡುತ್ತಿದ್ದುದನ್ನು ಕಂಡ ಸ್ವಾಮೀಜಿ ತಮ್ಮ ಹೆಗಲನ್ನು ಅವರಿಗೆ ಆಸರೆಯಾಗಿ ಕೊಟ್ಟು, ತಮ್ಮ ಕೈಯನ್ನು ಧರ್ಮಪಾಲರ ಸೊಂಟಕ್ಕೆ ಬಳಸಿ ಹಿಡಿದು, ಅವರು ತಮ್ಮ ಕಾಲನ್ನು ಹೊರಕ್ಕೆಳೆಯಲು ಸಹಾಯ ಮಾಡಿದರು. ಕುಟೀರಕ್ಕೆ ಬಂದ ಧರ್ಮಪಾಲರು ತಮ್ಮ ಕಾಲಿಗೆ ನೀರು ಹಾಕಿಕೊಳ್ಳಲು ಹೋದಾಗ, ಸ್ವಾಮೀಜಿಯವರೇ ತಂಬಿಗೆಯನ್ನು ಕಿತ್ತುಕೊಂಡು, ಎಲ್ಲ ಪ್ರತಿಭಟಿಸುತ್ತಿದ್ದರೂ ಕೇಳದೆ, "ನೀವು ನಮ್ಮ ಅತಿಥಿ. ನಾನದನ್ನು ಮಾಡಬೇಕು" ಎಂದು ಧರ್ಮಪಾಲರ ಕಾಲಿಗೆ ನೀರು ಹಾಕುತ್ತಾರೆ.

ಇನ್ನೊಮ್ಮೆ ತಮ್ಮ ಉತ್ತರಭಾರತ ಪ್ರವಾಸಾನಂತರ ಶ್ರೀರಾಮ

ಕೃಷ್ಣರ ಪ್ರಮುಖ ಗೃಹೀಭಕ್ತನಾದ ರಾಮಚಂದ್ರದತ್ತನು ಅಸ್ವಸ್ಥನಾಗಿದ್ದುದನ್ನು ಕೇಳಿ ಆತನನ್ನು ನೋಡಲು ಹೋದರು. ಸ್ವಲ್ಪ ಸಮಯ ಅವರಿಬ್ಬರೂ ಮಾತನಾಡಿದ ಬಳಿಕ, ರಾಮಚಂದ್ರನು ಎದ್ದು ಶೌಚಾಲಯಕ್ಕೆ ಹೋಗಲು ಉದ್ಯುಕ್ತನಾದನು. ಸ್ವಾಮೀಜಿಯವರು ತಕ್ಷಣ ಎದ್ದು, ರಾಮಚಂದ್ರನ ಪಾದರಕ್ಷೆಗಳನ್ನು ಎತ್ತಿಕೊಂಡು ಅತ್ಯಂತ ಗೌರವಸೂಚಕವಾಗಿ ಅವನ್ನು ಧರಿಸಲು ಸಹಾಯ ಮಾಡುತ್ತಾರೆ. ರಾಮಚಂದ್ರನು ಭಾವಾವಿಷ್ಟನಾಗಿ ಕಣ್ಣಲ್ಲಿ ನೀರು ತುಂಬಿ ಸ್ವಾಮೀಜಿಗೆ ಹೇಳಿದ, "ಜನರು ಹೇಳಿದರು, ನೀನು ಅಮೇರಿಕಕ್ಕೆ ಹೋಗಿ ದೊಡ್ಡವ್ಯಕ್ತಿಯಾದಮೇಲೆ ನಮ್ಮನ್ನು ಮರೆತಿರುವುದಾಗಿ. ಆದರೆ ನೀನು ಅದೇ ಹಳೆಯ ಬಿಲೇ ಎಂದು ನಾನು ಕಂಡುಕೊಂಡೆ. ನಾನು ನಿನ್ನನ್ನು ತಪ್ಪಾಗಿ ಭಾವಿಸಿದೆ."

### ಸರ್ವಭೂತಹಿತಚಿಂತಕ

ಸ್ವಾಮೀಜಿ ಹೇಳುತ್ತಾರೆ, "ತನ್ನ ಸಹಮಾನವರಿಗೆ ಒಳಿತನ್ನುಂಟುಮಾಡಬೇಕೆಂಬ ಭಾವನೆಯೇ ಇಲ್ಲದವನು ಪಶುವೇ ಸರಿ, ಅವನು ಸಂನ್ಯಾಸಿಯಾಗಿರಲಾರ." ಕಲ್ಕತ್ತದಲ್ಲಿ ಪ್ಲೇಗ್ ಮಾರಿ ಹರಡಿತು. ಡಾರ್ಜಿಲಿಂಗ್‌ನಲ್ಲಿದ್ದ ಸ್ವಾಮೀಜಿ ಸುದ್ದಿ ಕೇಳಿ ತಕ್ಷಣ ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಕಲ್ಕತ್ತಕ್ಕೆ ಧಾವಿಸಿದರು. ಅವರು ಮಠಕ್ಕೆ ತೆರಳಿ ಪ್ಲೇಗ್ ನಿವಾರಣೆಗಾಗಿ ಹಾಗೂ ರೋಗಿಗಳ ಉಪಚಾರಕ್ಕಾಗಿ ನಿವೇದಿತಾ ಮತ್ತು ಸ್ವಾಮಿ ಸದಾನಂದರ ನೇತೃತ್ವದಲ್ಲಿ ಒಂದು ಪರಿಹಾರಕಾರ್ಯದ ಪ್ರಕಟನೆಯನ್ನು ಸಿದ್ಧಪಡಿಸಿದರು. ಕಲ್ಕತ್ತದ ಪ್ರತಿಯೊಂದು ಮನೆಗೂ ಅದನ್ನು ತಲುಪಿಸಲಾಯಿತು. ತಕ್ಷಣವೇ ಒಂದು ಸೇವಾಕೇಂದ್ರವನ್ನು ಸ್ಥಾಪಿಸುವ ಸನ್ನದ್ಧತೆ ನಡೆಯಿತು. ಅವರ ಉತ್ಸಾಹವನ್ನು ಕಂಡ ಸೋದರ ಸಂನ್ಯಾಸಿಯೊಬ್ಬರು "ಸ್ವಾಮೀಜಿ, ಸೇವೆ ಮಾಡಲು ಅಷ್ಟೆಲ್ಲ ಹಣವನ್ನು ಎಲ್ಲಿಂದ ತರುವುದು?" ಎಂದು ಪ್ರಶ್ನಿಸಿದರು. ತಕ್ಷಣ ಸ್ವಾಮೀಜಿ ಹೇಳಿದರು, "ಏಕೆ, ನಾವು ಹೊಸದಾಗಿ ಮಠಕ್ಕೆ ತೆಗೆದುಕೊಂಡ ಜಾಗವಿದೆಯಲ್ಲ? ಸಂದರ್ಭ ಬಂದರೆ ಅದನ್ನೇ ಮಾರಿಬಿಡುವುದು! ನಾವು ಸಂನ್ಯಾಸಿಗಳು; ನಾವು ಹಿಂದೆ ಇದ್ದಂತೆಯೇ ಭಿಕ್ಷಾನ್ನವನ್ನು ತಿಂದುಕೊಂಡು ಮರದ ಬುಡದಲ್ಲಿ ಮಲಗಲು ಸದಾ ಸಿದ್ಧರಿರಬೇಕು. ಏನು! ಈ ಭೂಮಿ-ಆಸ್ತಿಯನ್ನೆಲ್ಲ ಮಾರಿ ನಮ್ಮ ಕಣ್ಣೆದುರಿಗೇ ನರಳುತ್ತಿರುವ ಸಹಸ್ರಾರು ಜನರ ಸಂಕಟವನ್ನು ಹೋಗಲಾಡಿಸಲು ಸಾಧ್ಯವಾಗುವುದಾದರೆ, ಇನ್ನು ನಮಗೆ ಈ ಆಸ್ತಿಪಾಸ್ತಿಯನ್ನೆಲ್ಲ ಕಟ್ಟಿಕೊಂಡು ಏನಾಗಬೇಕು!"

### ಮರಣದಿ ಶರಣನ ಗುಣ ಕಾಣು

ಯಾರು ತಮ್ಮ ಆಸೆಗಳಿಗೆ ಸಂಪೂರ್ಣ ಸತ್ತಂತಿರುತ್ತಾರೋ, ಅವರು ಸಾವನ್ನು ಹಸನ್ಮುಖದಿಂದ ಸ್ವಾಗತಿಸುತ್ತಾರೆ. ತನ್ನ ಆಸೆಗಳನ್ನು ಸುಟ್ಟು, ಸಾಧನೆಗಳಿಂದ ಸಮ್ಯಗ್‌ಜ್ಞಾನವನ್ನು ಪಡೆದ ಸಂನ್ಯಾಸಿ ತನ್ನ ದೇಹವನ್ನು ಕೇವಲ ಲೋಕಹಿತಕ್ಕಾಗಿ ರಕ್ಷಿಸುತ್ತಾನೆ; ಈ ಲೋಕದಿಂದ ಅವನಿಗಾಗಬೇಕಾದ ಉಪಕಾರ ಯಾವುದೂ ಇಲ್ಲ. ಹೀಗಾಗಿ ಆತ ಸಹಜವಾಗಿಯೇ ಸದಾ ಸಾವಿಗೆ ಸಿದ್ಧನಾಗಿರುತ್ತಾನೆ. ಸಾವು ಸನ್ನಿಹಿತವಾದಾಗ ತನ್ನ ಮನಸ್ಸನ್ನು ಆತ್ಮತತ್ತ್ವದಲ್ಲಿ ನಿಲ್ಲಿಸಿ ಪ್ರಾಣವನ್ನು ತ್ಯಜಿಸುತ್ತಾನೆ.

"ನಾನು ಒಬ್ಬ ಆದರ್ಶ ಸಂನ್ಯಾಸಿಯಾದ ರಾಮಕೃಷ್ಣ ಪರಮಹಂಸರಂತೆ ಸಾವನ್ನಪ್ಪಲು ಬಯಸುತ್ತೇನೆ" ಎಂದು ಸೋದರಿ ನಿವೇದಿತಾಗೆ ಹೇಳುತ್ತಾರೆ ಸ್ವಾಮೀಜಿ. ತಾವೀಗ ವಿಶಾಲಗೊಳ್ಳುವುದಾಗಿಯೂ, ಬೇಗ ತಮ್ಮ ದೇಹವನ್ನು ಬಿಸುಟು ಬಿಟುವುದಾಗಿಯೂ ಸ್ವಾಮೀಜಿ ತಮ್ಮ ಸೋದರ ಸಂನ್ಯಾಸಿಯೊಬ್ಬರಿಗೆ ಹೇಳುತ್ತಿದ್ದರು. ತಮ್ಮ ನಿರ್ಯಾಣದ ದಿನವನ್ನು ಮುಂದಾಗಿಯೇ ತಿಳಿಸಿ, ೧೯೦೨ ಜುಲೈ ೪ರ ಸಂಜೆ ತಮ್ಮ ಪ್ರಾಣವಾಯುವನ್ನು ಸುಷುಮ್ನಾ ಮಾರ್ಗವಾಗಿ ಮೇಲಕ್ಕೇರಿಸಿ ಬ್ರಹ್ಮರಂಧ್ರ ಭೇದಿಸಿ ಹೊರಕ್ಕೆ ಹಾಕುವುದರ ಮೂಲಕ ವಿವೇಕಾನಂದರು ಮಹಾಸಮಾಧಿಯನ್ನು ಹೊಂದಿದರು.

ಸಂನ್ಯಾಸಿಯ ಆದರ್ಶ ಅಸಿಧಾರೆಯಂತೆ ಬಹು ಕಠಿಣ. ಅದು ಎಲ್ಲ ಆದರ್ಶಗಳ ರಾಜ. ಸಂನ್ಯಾಸಿಯ ನೂರಕ್ಕೆ ನೂರು ಪಾಲಿನ ತ್ಯಾಗವನ್ನು ನೋಡಿಯಾದರೂ ಇತರೇ ಜನ ಅದರ ಒಂದಂಶವನ್ನಾದರೂ ಪಾಲಿಸಲು ಮನಸ್ಸು ಮಾಡುತ್ತಾರೆ. ಆತನ ಹದಿನಾರಾಣೆಯ ಧರ್ಮಾಚರಣೆಯನ್ನು ಕಂಡಾದರೂ ಇತರರು ಒಂದಾಣೆಯ ಧರ್ಮವನ್ನು ಆಚರಿಸಲು ಪ್ರಯತ್ನಿಸುತ್ತಾರೆ. ಯಾಜ್ಞವಲ್ಕ್ಯೋಪನಿಷತ್ತು ಹೇಳುತ್ತದೆ : "ಯಾರು ತಿತಿಕ್ಷಾ, ಜ್ಞಾನ, ವೈರಾಗ್ಯ, ಶಮವೇ ಮೊದಲಾದ ಗುಣಗಳನ್ನು ತ್ಯಜಿಸಿ ಕೇವಲ ಭಿಕ್ಷೆಗಳಿಸಿ ಜೀವನ ನಡೆಸುತ್ತಾನೋ ಆತ ಪಾಪಿ, ಯತಿಯ ಧರ್ಮವನ್ನು ನಾಶಮಾಡಿದವನು." ಸಂನ್ಯಾಸಿಗಳಲ್ಲೂ ಪ್ರಮಾದಿಗಳು, ವಿಷಯಲಂಪಟರು, ಚಾಡಿಕೋರರು, ಕಲಹಪ್ರಿಯರು ಕಾಣಸಿಗುತ್ತಾರೆ ಮತ್ತು ಇವರು ವೇದಬಾಹಿರ ಕಾರ್ಯದಲ್ಲಿ ಆಸಕ್ತರಾದವರೆಂದು ಅದೇ ಉಪನಿಷತ್ತು ಹೇಳುತ್ತದೆ. ಯಾರು ಇತರರಿಗೆ ದಾರಿ ತೋರುತ್ತಾರೋ ಅವರೇ ಅಂಧರಾದಲ್ಲಿ ತಮ್ಮೊಂದಿಗೆ ಅವರು ತಮ್ಮ ಅಂಧಬಾಂಧವರನ್ನೂ ಕಂದರಕ್ಕೆ ಒಯ್ಯುವುದು ದಿಟ. ಸಮಾಜದಲ್ಲಿ ಈ ಆದರ್ಶ ಸಡಿಲವಾದಾಗ ಅಲ್ಲಲ್ಲಿ ಸ್ವಾಮಿ ವಿವೇಕಾನಂದರಂಥ ಸಂನ್ಯಾಸಿಗಳು ಜನ್ಮವೆತ್ತಿ ತಮ್ಮ ಸೋದರ ಸಂನ್ಯಾಸಿಗಳಿಗೆ ಕರೆ ನೀಡುತ್ತಾರೆ:

**ಏಳು, ಮೇಲೇಳೇಳು ಸಾಧುವೆ, ಹಾಡು ಚಾಗಿಯ ಹಾಡನು;**
**ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು!**

ಯಾರು ಸಂನ್ಯಾಸಿಗಳೋ ಅವರು ಪರರಿಗೆ ಹಿತವನ್ನು ಮಾಡುವುದಕ್ಕೆ ಪ್ರಯತ್ನಿಸಬೇಕು. ಏಕೆಂದರೆ ಸಂನ್ಯಾಸವೆಂದರೆ ಅದೇ ಅರ್ಥ... ಸಂನ್ಯಾಸವೆಂದರೆ ಮೃತ್ಯುಪ್ರೇಮ ಎಂದು ಸಂಕ್ಷೇಪವಾಗಿ ಹೇಳುತ್ತೇನೆ. ಪ್ರಾಪಂಚಿಕರು ಜೀವನವನ್ನು ಪ್ರೀತಿಸುವರು. ಸಂನ್ಯಾಸಿ ಮೃತ್ಯುವನ್ನು ಪ್ರೀತಿಸಬೇಕು. –ಸ್ವಾಮಿ ವಿವೇಕಾನಂದ

ಸ್ಥಳದಾನ: ವಿಜಯಲಕ್ಷ್ಮಿ ಏಜೆನ್ಸೀಸ್, ಬೆಂಗಳೂರು